Sri H. N. NANJE GOWDA (Minister of State for Major Irrigation)—

(*a*) Yes.

(*b*) No.

(*c*) Rs. 142.22 lakhs. Area proposed to be irrigated is 21,000 acres.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ಹಿರೇಕೆರೂರು ತಾಲ್ಲೂಕಿನ ಮಾಸೂರ್ ಕೆರೆಯ ಕಚ್ಚೆಯ ನೀರಿನಿಂದ 21 ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಎಂದು ಹೇಳಿದ್ದೀರಿ. ಇದರಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಹೇಳುತ್ತೀರಾ ?

† ಶ್ರೀ ಎಚ್. ಎನ್. ನಂಜೇಗೌಡ.—ರಾಣಿಬೆನ್ನೂರಿನ 15 ಹಳ್ಳಿಗಳಿಗೆ ಅನುಕೂಲವಾಗುತ್ತದೆ ಮತ್ತು ಹಿರೇಕೆರೂರಿನ 29 ಹಳ್ಳಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ಈ ಯೋಜನೆಯನ್ನು ಅದಷ್ಟು ಜಾಗ್ರತೆ ಕೈಗೊಳ್ಳುತ್ತೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—ಈ ಯೋಜನೆಗೆ ತಾಂತ್ರಿಕ ಅನುಮತಿ ಬೇಕು. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದು ಕೃಷ್ಣಾ ನದಿಯ ಉಪನದಿ. ಬಹುಶಃ ಇದು ಟ್ರಿಬ್ಯೂನರ್ ಮುಂದೆ ಇರುವುದರಿಂದ ಇದು ತಿರ್ಮಾನವಾಗಿ ಬರುವವರೆಗೂ ಕ್ಲಿಯರೆನ್ಸ್ ಸಿಕ್ಕುವುದಿಲ್ಲ. ಕ್ಲಿಯರೆನ್ಸ್ ಬಂದ ತಕ್ಷಣ ಮತ್ತು ನರಕಾರದ ಹಣಕಾಸಿನ ಪರಿಸ್ಥಿತಿಯನ್ನೂ ಕೂಡ ನೋಡಿಕೊಂಡು ಅದಷ್ಟು ಜಾಗ್ರತೆ ಈ ಯೋಜನೆಯನ್ನು ಕೈಗೊಳ್ಳಬೇಕು ಎನ್ನುವುದು ಸರ್ಕಾರದ ಅಪೇಕ್ಷೆಯಾಗಿದೆ.

ಶ್ರೀ ಕೆ. ಫ್. ಪಾಟೀಲ್.—ಸ್ವಾಮಿ, ಕುಮುದ್ವತಿ ಅಣೆಕಟ್ಟು ಕಟ್ಟಿದ ನಂತರ ಆ ನೀರನ್ನು ಅಜ್ಜಂಪುರ ಮತ್ತು ಅಮರಾಪಟ್ಟಿಯವರೆಗೂ ಹಾಯಿಸಿಕೊಂಡ ನಂತರ ಈ ಮದಗ ಮಾಸೂರ್ ಕೆರೆಗೆ ಎಷ್ಟು ನೀರು ದೊರೆಯುತ್ತದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಈ ಎಲ್ಲಾ ಸಮಸ್ಯೆಯೂ ಟ್ರಿಬ್ಯೂನರ್ ಮುಂದೆ ಇರುವುದರಿಂದ ಯಾವ ಯಾವ ಕೆರೆಗೆ ಎಷ್ಟೆಷ್ಟು ನೀರು ದೊರೆಯುತ್ತದೆ, ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಎಷ್ಟೆಷ್ಟು ನೀರು ದೊರೆಯುತ್ತದೆ ಎಂದು ರೆಕ್ಯಾಚಾರ ಹಾಕಿ ಈಗ ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ.

Tank Repair Works in N. R. Pura Taluk

74 **Sri K. N. VEERAPPA GOWDA** (Sringeri).—

Will the Minister for Public Works and Electricity be pleased to state:—

(*a*) the reasons for non-payment of money to contractors in respect of some tank repair works in N. R. Pura Taluk, which were taken up by P. W. D. and which have been suspended due to differences in the department ;

(*b*) the steps taken by Government to provide relief to the ryots who are put to hardships due to suspension of works ;

(*c*) the reason for the delay in getting the report from Vigilance Commission though the matter was referred to them three years back.

Sri H. M. CHANNABASAPPA (Minister for Public Works and Electricity).—

(*a*) 28 tank repair works were undertaken during 1968-69 and bills in respect of them were forwarded to the Divison office in the month of March of the same year. The bills could not be passed due to some defects in the works. As the then S. E. reported the matter, the Government in their No. PWD 125 SDA 69 of 20th November 1969 referred the same to the Vigilance Commission for enquiry. As the enquiry is pending, the remaining portion of the work could not be completed and payments to contractor could not also be made.

(*b*) Ryots are not put to any hardship due to suspension of these works.

(*c*) The Vigilance Commission has not completed their enquiry yet.

ಶ್ರೀ ಕೆ. ಎನ್. ವೀರಪ್ಪಗೌಡ.—ಸ್ವಾಮಿ, ಈ ಉತ್ತರ ಅಚ್ಚಾಗಿರುವುದನ್ನು ನೋಡಿದರೆ ಶ್ರೀಮಾನ್ ಚನ್ನಬಸಪ್ಪನವರಿಗೆ ಸೇರಿದ ಈ ಇಲಾಖೆಯಲ್ಲಿ ಇಂತಹ ಉತ್ತರ ಬರುತ್ತದೆ ಎಂದು ನಾನು ನಿರೀಕ್ಷಣೆ ಮಾಡಿರಲಿಲ್ಲ. ಕಾರಣ ತಾ 31-3-1969 ರಲ್ಲಿ ಇಂಜನಿಯರು ಕಂಟ್ರಾಕ್ಟರು ಗಳಿಗೆ ಕೆಲಸ ಮಾಡುವುದಕ್ಕೆ ಆರ್ಡರ್ ಕೊಟ್ಟಮೇಲೆ ಅವರು ಕೆಲಸ ಪೂರೈಸುವ ಮೊದಲೇ ಅವರಿಗೆ ಪೇಮೆಂಟ್ ಮಾಡಿದ್ದಾರೆ. ಆದುದರಿಂದ ಯಾರು ಪೇಮೆಂಟ್ ಮಾಡಿದ್ದಾರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಡವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸ ಮಾಡಿದಮೇಲೆ ತಕ್ಷಣ ಹಣ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಮೊದಲ ನೋಟಕ್ಕೇನೇ ಇದು ಸ್ವಲ್ಪ ಕರ್ತವ್ಯ ಲೋಪ ಮಾಡಿದಂತೆ ಕಾಣುತ್ತದೆ. ಆದುದರಿಂದ ಕೆಲಸ ಮಾಡದೇ ಮೊದಲು ನೋಟಕ್ಕೇನೇ ಅವರಿಗೆ ಪೇಮೆಂಟ್ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಮತ್ತು ಇದರಲ್ಲಿ ಕರ್ತವ್ಯ ಲೋಪ ಇದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎನ್ ವೀರಪ್ಪಗೌಡ.—ನಾನು ಹೋದಸಾರಿಯೂ ಕೂಡ ಇದೇ ಅಸೆಂಬ್ಲಿಯೊಳಗೆ ಈ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅವರು ಜಾಗೃತಾ ಆಯೋಗಕ್ಕೆ ತಾ 21-11-1969 ರಲ್ಲಿ ಕಳುಹಿಸಿದ್ದೇವೆ ಎಂದು ಹೇಳಿದರು. ಅದೂ ಇನ್ನೂವರೆಗೆ ಬರದೇ ಇದ್ದರೆ ಅದರ ಅರ್ಥ ಏನು ಎಂದು ತಿಳಿದುಕೊಳ್ಳಬೇಕು. ಜಾಗೃತಾ ಆಯೋಗ ಎಂದರೆ 24 ಗಂಟೆ ಒಳಗೆ ತೀರ್ಮಾನ ತೆಗೆದುಕೊಳ್ಳಬೇಕು. ಈಗ ನೀವು ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ಹೇಳುತ್ತೀರಾ, ಇದು ಮೊದಲನೆಯ ಪ್ರಶ್ನೆ.

ಎರಡನೇ ಪ್ರಶ್ನೆ ಈ ಕೆಲಸಗಳು ನಿಂತಿರುವುದರಿಂದ ರೈತರಿಗೆ ಯಾವ ತೊಂದರೆಗಳೂ ಆಗಿಲ್ಲ ಎಂದು ಹೇಳಿದ್ದೀರಿ. ಈ ಉತ್ತರವನ್ನು ಅವರ ರಿಪೋರ್ಟ್ ತರಿಸಿಕೊಂಡು ಹೇಳುತ್ತಿದ್ದೀರಾ ಅಥವಾ ಏನಾದರೂ ಒಂದು ಊಹೆ ಮಾಡಿ ಹೇಳುತ್ತಿದ್ದೀರಾ ? ಇದು ನನಗೆ ಅನುಮಾನ ಕಂಡು ಬರುತ್ತದೆ, ಏತಕ್ಕೆಂದರೆ ಅಲ್ಲಿ ನಾನೇ ಹೋಗಿ ನೋಡಿಕೊಂಡು ಬಂದಿದ್ದೇನೆ, ಅಲ್ಲಿ ತೂಬು ಒಡೆದು ಜನ ತೊಂದರೆ ಪಡುತ್ತಾ ಇರುವುದನ್ನು ನೋಡಿ ಹೇಳುತ್ತಾ ಇದ್ದೇನೆ. ಇದರ ಬಗ್ಗೆ ತಾವು ಏನಾದರೂ ವಿವರಣೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊಟ್ಟ ಮೊದಲ ಪ್ರಶ್ನೆಗೆ ಜಾಗೃತಾ ಆಯೋಗದಿಂದ ಇಷ್ಟು ದಿವಸಗಳಾದರೂ ವರದಿ ಸರ್ಕಾರಕ್ಕೆ ಬರಲಿಲ್ಲ ಅವರು ಏನು ವ್ಯಥೆ ಪಟ್ಟುಕೊಂಡಿದ್ದಾರೋ ಅದಕ್ಕಿಂತಲೂ ಹೆಚ್ಚಿನ ವ್ಯಥೆ ಸರ್ಕಾರಕ್ಕೂ ಆಗುತ್ತದೆ. ಆದುದರಿಂದ ಅದರ ವರದಿಯನ್ನು ಆದಷ್ಟು ಜಾಗ್ರತೆ ತರಿಸಿಕೊಳ್ಳುತ್ತೇವೆ.

ಇನ್ನು ಎರಡನೇ ಪ್ರಶ್ನೆಗೆ ಈ ಕೆಲಸಗಳು ನಿಂತಿರುವುದರಿಂದ ರೈತರಿಗೆ ಯಾವ ತೊಂದರೆಗಳೂ ಆಗಿಲ್ಲ ಎಂದು ಉತ್ತರ ಕೊಟ್ಟಿದ್ದಾರಲ್ಲಾ ಅದು ಹೇಗೆ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಹೇಳುವುದಾದರೆ ಅದರಲ್ಲೂ ಕೂಡ ರಿಪೇರಿ ವರ್ಕ್ಸ್ ಇದೆ. ಇಲ್ಲ ಎಂದು ಹೇಳುವುದಿಲ್ಲ. ಅದು ರೆಸ್ಟೋರೇಷನ್ ವರ್ಕ್ಸ್ ಅಲ್ಲ. ಅಲ್ಲಿ ಸ್ವಲ್ಪಮಟ್ಟಿಗೆ ಕಾಮಗಾರಿ ಕೆಲಸಗಳು ಮಾಡಬೇಕಾದ್ದು

ಇದೆ. ಆ ಕೆಲಸಗಳನ್ನು ಮಾಡದೇ ಬಿಟ್ಟಿದ್ದರೆ ಅದರಿಂದ ಅವರು ತೊಂದರೆ ಪಡಬೇಕಾದ ಪರಿಸ್ಥಿತಿ ಇಲ್ಲ ಮೊದಲು ಎಷ್ಟು ತೊಂದರೆ ಇತ್ತೋ ಅಷ್ಟೇ ತೊಂದರೆ ಈಗಲೂ ಇದೆ. ರಿಪೇರಿ ಆಗಿದ್ದರೆ ಇನ್ನೂ ಹೆಚ್ಚಿನ ಪ್ರಯೋಜನ ಆಗುತ್ತಿತ್ತು. ಈ ದೃಷ್ಟಿಯಲ್ಲಿ ಅವರಿಗೆ ತೊಂದರೆ ಆಗುವುದಿಲ್ಲ ಎಂದು ಹೇಳಿದೆನೇವಿನಃ ಅದರಿಂದ ತೆಂದರೆಯೇನಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ತಾವು ಇದರ ಬಗ್ಗೆ ಅಕ್ಯೂಯಲ್ ರಿಪೋರ್ಟ್‌ನ್ನು ತರಿಸಿಕೊಂಡಿಲ್ಲ ಅಂತ ಕಾಣುತ್ತದೆ. ಅಲ್ಲ ರಿಪೇರಿ ಕೆಲಸ ಮಾಡದೇ ಇದ್ದುದರಿಂದ ತೊಂದರೆ ಆಗಿದೆ ಎಂದು ಹೇಳಲಿಲ್ಲ. ಅಲ್ಲಿ ತೂಬೇ ಒಡೆದುಹೋಗಿ ಜನರು ತೊಂದರೆ ಪಡುತ್ತಿದ್ದಾರೆ. ಅಲ್ಲ ಮಾಮೂಲಾಗಿ ಬರತಕ್ಕಂಥ ನೀರೂ ಕೂಡ ಬರುತ್ತಾ ಇಲ್ಲ. ಆದುದರಿಂದ ಅಲ್ಲಿ ರಿಪೇರಿ ಕೆಲಸವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದಾದರೂ ನಿರ್ದಿಷ್ಟವಾದ ಕೆಲಸದ ಬಾಬ್ತು ಕೇಳಿದರೆ ಉತ್ತರ ಹೇಳಬಹುದು. 28 ಕೆರೆಗಳ ಸಂಬಂಧದಲ್ಲಿ ಉತ್ತರ ಇರುವಾಗ ಇದರಲ್ಲಿ ಯಾವ ಯಾವ ಕೆರೆಗಳಲ್ಲಿ ಯಾವ ಯಾವ ತರಹ ರಿಪೇರಿ ಕೆಲಸಗಳನ್ನು ಕೈಗೊಂಡಿದ್ದೀರಿ ಎನ್ನುವುದಕ್ಕೆ ತಕ್ಕ ವಿವರಣೆಗಳು ನನ್ನಲ್ಲಿಲ್ಲ.

Sri C. M. ARUMUGAM.—It is stated that 28 tanks were taken up for repair work. Before the bills were prepared and sent to the division office, were the tanks repaired ?

Sri H. M. CHANNABASAPPA.—The works have been carried out to some extent in some of the tanks.

Sri C. M. ARUMUGAM.—May I know whether the tanks were repaired before the bills were sent to the division office ?

Sri H. M. CHANNABASAPPA.—The process of repairing was on the anvil.

Sri C. M. ARUMUGAM.—When the repairing work was going on, how could bills be sent to the division office ?

Sri H. M. CHANNABASAPPA.—As and when works are done, bills are sent.

Sri C. M. ARUMUGAM.—What is the amount involved ?

Sri H. M. CHANNABASAPPA.—The total estimate is Rs. 2,22,951 out of which works carried out amounts to Rs. 53,951.

Indi taluk Scheduled caste Housing Society

86. **Sri j. L. KABADE** (Ballolli).—

Will the Minister for Co-operation be pleased to state :—

(*a*) the number of persons that enrolled their names, as members of the Indi Taluk Scheduled Caste Housing Society ;

(*b*) of them, the number of persons that got loans from the Society to construct houses ;

(*c*) whether it is a fact that the Society has become defunct due to non-payment of arrears of loan from the members ;

(*d*) whether it is also a fact that on account of this a large number of share holders have not been able to get housing loan ;

(*e*) the steps taken to start the society ?